IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಆಧುನಿಕ ಕನ್ನಡ ಸಿನಿಮಾರಂಗದ ಭಿತ್ತಿಪತ್ರ ಜಾಹೀರಾತುಗಳಲ್ಲಿ ಮಹಿಳೆಯರ ಚಿತ್ರಣ: ಒಂದು ಸಂಜ್ಞಾತ್ಮಕ ವಿಶ್ಲೇಷಣೆ

**ದರ್ಶನ್. ಎಂ[1] , ಡಾ . ಸಿ.ಕೆ ಪುಟ್ಟಸ್ವಾಮಿ [2]**

ಸಂಶೋಧನಾ ವಿದ್ಯಾರ್ಥಿ 1 **,**ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗ**,** ಮೈಸೂರು ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ, ಮೈಸೂರು

ಮಾರ್ಗದರ್ಶಕರು,ಪ್ರಾಧ್ಯಾಪಕರು 2, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಮೈಸೂರು
ವಿಶ್ವವಿದ್ಯಾನಿಲಯ,ಮಾನಸ ಗಂಗೋತ್ರಿ, ಮೈಸೂರು,

**ಸಾರಲೇಖ:**

ಭಾರತ ದೇಶವು ವಿವಿಧ ಸಂಸ್ಕೃತಿಯ ನೆಲಬೀಡಾಗಿದೆ ಹಲವಾರು ಭಾಷೆಗಳಿಂದ ಕೂಡಿದ ಹಾಗೂ ಅನೇಕ ವೈವಿದ್ಯತೆಯಿಂದ ಏಕತೆಯ ನಾಡಾಗಿದ್ದು, ಕಲೆಗಳಿಗೆ, ಮನರಂಜನೆಗಳಿಗೆ ಹೆಸರುವಾಸಿಯಾದ ರಾಷ್ಟ್ರವಾಗಿದೆ. ಭಾರತೀಯ ಸಿನಿಮಾವು ಪ್ರಪಂಚದಾದ್ಯಂತ ಅಕರ್ಷಿಸುವ ವಿಶೇಷ ಮಾಧ್ಯಮವಾಗಿದೆ. ಸಿನಿಮಾ ಸಮಾಜದ ಪ್ರತಿಬಿಂಬ, ಯಾವುದೇ ಕಲೆ ಮತ್ತು ಸಾಹಿತ್ಯ ತನ್ನ ಸಮಕಾಲೀನ ಸಮಾಜವನ್ನು ಪ್ರತಿಬಿಂಬಿಸುವಂತೆ ಸಿನಿಮಾರಂಗವು ಜನಪ್ರಿಯ ಮಾಧ್ಯಮವಾಗಿದೆ. ಸಿನಿಮಾ ಮತ್ತು ಸಿನಿಮಾಗಳನ್ನು ಬಿತ್ತರಿಸುವ ಜಾಹೀರಾತುಗಳು ಸಹ ಸಮಾಜದ ಸಂಸ್ಕೃತಿಯನ್ನು ಹಾಗೂ ಸಮಾಜದ ಆಗು- ಹೋಗುಗಳನ್ನು ಸವಿಸ್ತಾರವಾಗಿ ಚಿತ್ರಸುವ ಕಾರ್ಯಮಾಡುತ್ತದೆ. ಸಿನಿಮಾ ಭಿತ್ತಿಚಿತ್ರ ಜಾಹೀರಾತುಗಳು ಚಿತ್ರಮಂದಿರಗಳಿಗೆ ಪ್ರೇಕ್ಷಕರನ್ನು ಕರೆತರುವಲ್ಲಿ ಮಹತ್ವದ ಪಾತ್ರವನ್ನುವಹಿಸುತ್ತದೆ. ಭಾರತ ಪುರಷಪ್ರಧಾನ ರಾಷ್ಟ್ರವಾಗಿದೆ. ಪುರುಷಪ್ರಧಾನವಾದ ಸಮಾಜದಲ್ಲಿ ಮಹಿಳೆಯರನ್ನು ಸಿನಿಮಾದಲ್ಲಿ ಹಾಗೂ ಸಿನಿಮಾ ಜಾಹೀರಾತುಗಳಲ್ಲಿ ಚಿತ್ರಿಸುವುದು ಏಕಮುಖವಾಗಿದೆ. ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಸಿನಿಮಾಗಳಲ್ಲಿ ಲಿಂಗ ವ್ಯತ್ಯಾಸ ಮತ್ತು ಲಿಂಗ ಸಮಾನತೆಗಳು ಅನಿವಾರ್ಯವಾಗಿ ಬೆಸೆದುಕೊಂಡಿರುವುದರಿಂದ ಸಿನಿಮಾ ಪರದೆಯ ಮೇಲೆ ಸ್ತ್ರೀ ಪುರುಷರ ನಡುವೆ ತಾರತಮ್ಯ ಸಮಾನತೆಯ ಸಂಘರ್ಷಗಳನ್ನು ಕಾಣಬಹುದಾಗಿದೆ. ಅದರಲ್ಲೂ ಸಿನಿಮಾ ಭಿತ್ತಿ ಚಿತ್ರ ಜಾಹೀರಾತುಗಳಲ್ಲಿ ಮಹಿಳೆಯರನ್ನು ಹೇಗೆ ತೋರಿಸುವ ರೀತಿ ಲೈಗಿಂಕವಾಗಿ ಆಕರ್ಷಿಸುವ, ಪ್ರಚೋದಿಸುವ ಜಾಹೀರಾತು ಸರುಕಾಗಿ ಮಾರ್ಪಾಡಾಗಿರುವುದು ದುರಂತವಾಗಿದೆ. ಮಹಿಳೆಯರನ್ನು, ಸಿನಿಮಾದ ಪಾತ್ರದಾರಿಯನ್ನು ಚಲನಚಿತ್ರಗಳ ಭಿತ್ತಿಚಿತ್ರ ಜಾಹೀರಾತುಗಳಲ್ಲಿ ಹೇಗೆ ಚಿತ್ರಿಸಲಾಗಿದೆ ಎಂಬುದರ ಬಗ್ಗೆ ಗಂಬೀರವಾಗಿ ಈ ಲೇಖನವು ಬೆಳಕು ಚೆಲ್ಲುತ್ತದೆ. ಇತ್ತೀಚಿನ ಆಧುನಿಕ ಹತ್ತು ಕನ್ನಡ ಚಲನಚಿತ್ರಗಳ ಭಿತ್ತಿಚಿತ್ರ ಜಾಹೀರಾತುಗಳನ್ನು ಮಾದರಿಯಾಗಿ ಪರಿಗಣಿಸಲಾಗಿದೆ, ಈ ಲೇಖನವು ದೃಶ್ಯ ಚಿತ್ರಗಳು ಸಂದೇಶವನ್ನು ಸಂವಹಿಸುವ ಸಂಜ್ಞಾತ್ಮಕ ವಿಧಾನ (ವಿಷುಯಲ್ ಸೆಮಿಯೋಟಿಕ್ಸ್) ಬಳಸಲಾಗಿದ್ದು, ಈ ವಿಧಾನದಿಂದ ಮಹಿಳೆಯರನ್ನು ಸಿನಿಮಾ ಭಿತ್ತಿಚಿತ್ರ ಜಾಹೀರಾತುಗಳಲ್ಲಿ ಹೇಗೆ ಚಿತ್ರಸಲಾಗುತ್ತಿದೆ ಎಂಬುದರ ಒಂದು ಸಂಜ್ಞಾತ್ಮಕ ಹಿನ್ನಲೆಯಲ್ಲಿ ವಿಶ್ಲೇಷಿಸಲಾಗುತ್ತದೆ.

**ಪೀಠಿಕೆ**

ಜಾಹೀರಾತು ಎನ್ನುವುದು ಕಲೆಯು ಹೌದು ವಿಜ್ಞಾನವೂ ಹೌದು ಯಾವುದೇ ಉತ್ಪನ್ನವನ್ನು ಗ್ರಾಹಕರ ಮನವೊಲಿಸುವ ಮೂಲಕ ಅವರ ಮನಸ್ಸಿನಲ್ಲಿ ಸ್ಥಿರವಾಗಿ ಮೂಡುವ ಗುರುತೆ ಜಾಹೀರಾತು, ಅದು ಗ್ರಾಹಕನನ್ನು ಖರೀದಿ ಮಾಡುವಂತೆ ಪ್ರೇರೆಪಿಸುವ ಸಾಧನವಾಗಿದೆ.
ಜಾಹೀರಾತು ಅರಬ್ಬಿಯ ಶಬ್ದ. ಅರಬ್ಬಿಯ ಝೂಹಿರ್ ಕನ್ನಡದಲ್ಲಿ "ಜಾಹೀರು" ಅಥವಾ "ಜಾಹೀರಾತು" ವಾಗಿದೆ. ಜಾಹೀರಾತು ಎಂದರೆ ಪ್ರಕಟಣೆ, ಸಾರ್ವಜನಿಕರಿಗೆ ಬಹಿರಂಗ ಪಡಿಸುವುದು ಎಂಬುದಾಗಿದೆ.

ಇಂಗ್ಲೀಷ್‌ನ "ಅಡ್ವರ್ಟೈಸ್‌ಮೆಂಟ್" ಪದದ ಮೂಲ ಲ್ಯಾಟಿನ್ ಭಾಷೆಯ ಅಡ್ವರ್ಟೋರ್, ಅಡ್ವರ್ಟೋರ್ ಎಂದರೆ ಸುತ್ತ ನೋಡು ಎಂದರ್ಥ ಜಾಹೀರಾತಿನ ಗುಣವೆಂದರೆ ಜನರ ಗಮನ ಸೆಳೆಯುವುದು.

ಜಾಹೀರಾತು, ಸಮೂಹ ಮಾಧ್ಯಮಗಳಿಗೆ ಆರ್ಥಿಕ ಬೆನ್ನೆಲುಬಾಗಿದೆ, ಇದು ವ್ಯಾಪಾರ ವಾಣಿಜ್ಯೋದ್ಯಮಗಳ ನಿರ್ವಹಣೆಯ ಮುಖ್ಯ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ. ಜಾಹೀರಾತು ದೃಶ್ಯ ರೂಪದಲ್ಲಿರಬಹುದು ಅಥವಾ ಮಾತಿನ ರೂಪದಲ್ಲಿರಬಹುದು ಅದು ಹೇಗೆ ಗ್ರಾಹಕನ ಮನ ತಲುಪತ್ತದೆ ಎನ್ನುವುದು ಬಹಳ ಮುಖ್ಯವಾಗಿದೆ. ಜಾಹೀರಾತಿನ ಮುಖ್ಯ ಉದ್ದೇಶವು ಒಂದು ಉತ್ಪನ್ನದ ಮಾರಾಟ ಹೆಚ್ಚಿಸುವುದು ಹಾಗೂ ಅಧಿಕ ಲಾಭಗಳಿಸಲು ನೆರವಾಗುವುದೇ ಆಗಿದೆ.

**ಸಮಾಜದ ಗ್ರಾಹಕರನ್ನು ಸೆಳೆಯುವ ಜಾಹೀರಾತು**

ಜಾಹೀರಾತು ಸತ್ಯವನ್ನು ಜನತೆಗೆ ತಿಳಿಸುವ ಮತ್ತು ಜನರಿಗೆ ನಂಬಿಕೆಯುಳ್ಳ ಮಾಹಿತಿಗಳನ್ನು ಹಂಚುವ, ರಾವನಿಸುವ ಸಾಧನವಾಗಿದೆ. ಗ್ರಾಹಕರನ್ನು ದಾರಿ ತಪ್ಪಿಸುವ ಹಾಗೂ ಸಭ್ಯತೆಯನ್ನು ಮೀರುವ ಮತ್ತು ಅಸಭ್ಯತೆಯನ್ನು ಪ್ರಚೋದಿಸುವ ಜಾಹೀರಾತುಗಳು ಸಮಾಜಕ್ಕೆ ಮಾರಕವಾಗಿದೆ. ಸಮಾಜದಲ್ಲಿ ಕೆಲವೊಂದು ಜಾಹೀರಾತುಗಳು ಸಾವರ್ವಜನಿಕರಿಗೆ ಅಗತ್ಯವಾಗಿದೆ ಎಲ್ಲಿ ಸರಕುಗಳು ದೊರೆಯುತ್ತವೆ, ಮನೆಗಳು ಎಲ್ಲಿ ಖಾಲಿಯಾಗಿದೆ , ಉದ್ಯೋಗ ಎಲ್ಲಿ ದೊರೆಯುತ್ತದೆ, ವಧು-ವರರ ಸಂಗಾತಿ ಹುಡುಕಾಟ ಎಂಬ ವಿಷಯಗಳನ್ನು ತಿಳಿಯಲು ಜಾಹೀರಾತು ಬೇಕೆ ಬೇಕೆ. ಕುಟುಂಬ ಯೋಜನೆ, ಏಡ್ಸ್, ಕ್ಯಾನ್ಸರ್ ತಡೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತಾದ ಜಾಹೀರಾತುಗಳು ಸಮಾಜಮುಖಿಯಾಗಿವೆ.
ಅದ್ದರಿಂದ ಸಮಾಜದಲ್ಲಿನ ಮಾಹಿತಿ ಅಗತ್ಯಗಳಿಗೆ ಜಾಹೀರಾತುಗಳು ಅವಶ್ಯಕವಾಗಿವೆ.
ಪತ್ರಿಕೆಗಳಲ್ಲಿ ದೂರದರ್ಶನಗಳಲ್ಲಿ ಜಾಹೀರಾತುಗಳು ಕೇವಲ ಓದುವುದು ಮತ್ತು ಕೇಳುವುದಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಪತ್ರಿಕೆ ಜಾಹೀರಾತುಗಳು ಓದುಗರ ಕಣ್ ಸೆಳೆಯುವಂತಿರಬೇಕು, ದೂರದರ್ಶನಗಳಲ್ಲಿ ಪ್ರಸಾರವಾಗುವ ಜಾಹೀರಾತುಗಳಲ್ಲಿನ ದೃಶ್ಯಗಳು ಕಣ್ ಮನ ತಣಿಸುವಂತಿರಬೇಕು ಜಾಹೀರಾತುಗಳು ಕೇವಲ ಮಾತಿಗಳಲ್ಲದೇ ದೃಶ್ಯ ಭಾಷೆಗಳು ಬಹುಮುಖ್ಯ ಪಾತ್ರವಹಿಸುತ್ತದೆ.

**ಸಮಾಜದಲ್ಲಿ ಮಹಿಳೆಯರ ಪಾತ್ರ**

ಮಹಿಳಾ ಸಮುದಾಯಕ್ಕೆ ಸಂಬಂದಿಸಿದ ಹಲವಾರು ವಿಷಯಗಳು, ವಿಚಾರಗಳು, ಸಬಲೀಕರಣ ಸಮಾಜಕ್ಕೆ ಪೂರಕ ಎಂಬುವುದನ್ನು ಮರೆಯುತ್ತಿದೆ. ಮಹಿಳೆಯನ್ನು ಬೌದ್ಧಿಕವಾಗಿ ಹಾಗೂ ದೈಹಿಕವಾಗಿ ಕೃಶಳೆಂಬ ಮನೋಭಾವನೆಯು ಇನ್ನು ಸಮಾಜದಲ್ಲಿ ಸ್ಥಿರವಾಗಿದೆ. ಮಹಿಳೆಯ ಸಾಧನೆಯು ಕೇವಲ ಕುಟುಂಬಕ್ಕೆ ಸೀಮಿತವಾಗಿದ್ದು ಆಧುನಿಕ ಯುಗದಲ್ಲಿ ದಬ್ಬಾಳಿಕೆ ಶೋಷಣೆಗಳು ಬೇರೆ ಬಗೆಯಾಗಿ ರೂಪಾತಾಳಿವೆ. ಆದರೆ ನಿಧಾನ ಗತಿಯಲ್ಲಿ ಪರಿಸ್ಥಿತಿ ಬದಲಾಗುತ್ತಿದ್ದರು ಅನೇಕ ಶಾಖೆಗಳಲ್ಲಿ ಮಹಿಳೆಯರ ಸಾಧನೆಗಳು ಇತಿಹಾಸ ಪುಟಗಳಲ್ಲಿ ಕಾಣಬಹುದಾಗಿದೆ. ತಮಗೆ ದೊರೆಯುವ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡು ಜೀವನದ ತನ್ನ ಎಲ್ಲಾ ಕಾರ್ಯ ಕ್ಷೇತ್ರಗಳಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತಿರುವುದು ಮಹಿಳೆಯ ಸಾಧನೆಯ ಸೂಚಕವಾಗಿದೆ.

**ಜನಪ್ರಿಯ ಮಾಧ್ಯಮವಾಗಿ ಸಿನಿಮಾ**

ಇತರೆ ಸಮೂಹ ಸಂವಹನ ಮಾಧ್ಯಮಗಳಿಗೆ ಹೋಲಿಸಿದಾಗ, ಸಿನಿಮಾ ತನ್ನದೇ ಆದ ನೋಡುವ ವರ್ಗವನ್ನು ಹೊಂದಿದೆ. ಸಿನಿಮಾ ವೀಕ್ಷಕರನ್ನು ಸದಭಿರುಚಿಯ ಹಾಗೂ ಸಮೂಹ ಆಸಕ್ತಿಯ ಎರಡು ಸ್ಥೂಲ ವರ್ಗಗಳನ್ನಾಗಿ ವಿಂಗಡಿಸಲಾಗುತ್ತದೆ. ಸದಭಿರುಚಿಯ ಚಿತ್ರಗಳನ್ನು ಬಯಸುವ ಜನ ತಮ್ಮದೇ ಆದಂತಹ ಕಲಾತ್ಮಕತೆಯನ್ನು, ಅಭಿರುಚಿ-ಆಸಕ್ತಿಗಳನ್ನು ನೋಡಲು ಬಯಸುತ್ತಾರೆ. ಆದರೆ ಬಹುಸಂಖ್ಯೆಯಲ್ಲಿ ತಯಾರಾಗುವ ವ್ಯಾಪಾರಿ ಚಿತ್ರಗಳು ಸಮೂಹ ಹಾಗೂ ಸಾಮಾನ್ಯ ಆಸಕ್ತಿಯ ಚಿತ್ರಗಳಾಗಿದ್ದು, ಜನಪ್ರಿಯವಾಗಿದೆ. ಸಿನಿಮಾ ತನ್ನ ಅಭಿವೃದ್ಧಿ ಪಥದಲ್ಲಿ ದೃಶ್ಯಭಾಷೆ, ಶಬ್ದದ ಹಾಗೂ ವರ್ಣದ ಮಹತ್ವ ಅಂಶಗಳನ್ನು ಮೈಗೂಡಿಸಿಕೊಂಡು ತನ್ನದೇ ಆದ ಛಾಪು ಹಾಗೂ ಆಕರ್ಷಣೆಯನ್ನು ಗಳಿಸಿಕೊಂಡಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಿನಿಮಾ ಜನ ಸಾಮಾನ್ಯರೊಂದಿಗೆ ಗುರುತಿಸಿಕೊಳ್ಳುವ ನಿಜವಾದ ಸಮೂಹ ಮಾಧ್ಯಮವಾಗಿದೆ. ಸಿನಿಮಾ ಎಷ್ಟು ಜನಪ್ರಿಯ ಮಾಧ್ಯಮವೆಂದರೆ ಗೋಡೆಯ ಮೇಲೆ ಸಿನಿಮಾದ ಒಂದು ಭಿತ್ತಿ ಪತ್ರದ ಜಾಹೀರಾತು ಪ್ರೇಕ್ಷಕರ ಗಮನ ಸೆಳೆದು ಚಿತ್ರಮಂದಿರಗಳಿಗೆ ಕರೆತರುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಸಿನಿಮಾ ಬಿತ್ತಿಪತ್ರ ಜಾಹೀರಾತುಗಳು ಹಲವಾರು ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ಅಹ್ವಾನ ಪತ್ರಿಕೆಯಾಗಿದ್ದು. ಪ್ರೇಕ್ಷಕರ ಕಣ್ ಮನ ಸೆಳೆಯುವಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತದೆ. ಮಾಧ್ಯಮಗಳಿಗೆ ಆರ್ಥಿಕ ಬೆನ್ನೆಲುಬಾಗಿದೆ, ಇದು ವ್ಯಾಪಾರ ವಾಣಿಜ್ಯೋದ್ಯಮಗಳ ನಿರ್ವಹಣೆಯ ಮುಖ್ಯ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ. ಜಾಹೀರಾತು ದೃಶ್ಯ ರೂಪದಲ್ಲಿರಬಹುದು ಅಥವಾ ಮಾತಿನ ರೂಪದಲ್ಲಿರಬಹುದು ಅದು ಹೇಗೆ ಗ್ರಾಹಕನ ಮನ

ತಲುಪತ್ತದೆ ಎನ್ನುವುದು ಬಹಳ ಮುಖ್ಯವಾಗಿದೆ. ಜಾಹೀರಾತಿನ ಮುಖ್ಯ ಉದ್ದೇಶವು ಒಂದು ಉತ್ಪನ್ನದ ಮಾರಾಟ ಹೆಚ್ಚಿಸುವುದು ಹಾಗೂ ಅಧಿಕ ಲಾಭಗಳಿಸಲು ನೆರವಾಗುವುದೇ ಆಗಿದೆ.

**ಉದ್ದೇಶಗಳು**

- ಆಧುನಿಕ ಕನ್ನಡ ಚಲನಚಿತ್ರಗಳ ಭಿತ್ತಿಪತ್ರ ಜಾಹೀರಾತುಗಳ ಬಗ್ಗೆ ಮಾಹಿತಿ
- ಕನ್ನಡ ಸಿನಿಮಾಗಳ ಜಾಹೀರಾತುಗಳಲ್ಲಿ ಮಹಿಳೆಯರ ಚಿತ್ರಣ
- ಇತ್ತೀಚಿನ ಕನ್ನಡ ಸಿನಿಮಾಗಳ ಬಿತ್ತಿಪತ್ರ ಜಾಹೀರಾತುಗಳಲ್ಲಿ ಸ್ತ್ರೀ ಮನೋಭಾವನೆಗಳು, ಸಂವೇದನೆಗಳ ಬಗ್ಗೆ ಕಿರು ವಿಶ್ಲೇಷಣೆ
- ಆಧುನಿಕ ಕನ್ನಡ ಚಲನಚಿತ್ರಗಳ ಭಿತ್ತಿಪತ್ರ ಜಾಹೀರಾತುಗಳ ಬಗ್ಗೆ ಮಾಹಿತಿ

ಸಿನಿಮಾದ ಭಿತ್ತಿ ಪತ್ರ ಜಾಹೀರಾತುಗಳು ಚಲನಚಿತ್ರಗಳನ್ನು ಪ್ರೇಕ್ಷಕರಿಗೆ ತಲಿಪಿಸುವ ಹಾಗೂ ಸಿನಿಮಾದ ಬಗ್ಗೆ ಮಾಹಿತಿ ನೀಡುವ ಒಂದು ಚಿತ್ರ ಮಾಧ್ಯಮವಾಗಿದೆ ಊರಿನ ರಸ್ತೆಯ ಗೋಡೆಗಳ ಮೇಲೆ, ಬಸ್ ನಿಲ್ದಾಣಗಳ ಪಕ್ಕದಲ್ಲಿ, ದಿನ ನಿತ್ಯದ ಪತ್ರಿಕೆಗಳ ಮುಖಪುಟಗಳಲ್ಲಿ ನಾವು ಸಿನಿಮಾ ಜಾಹೀರಾತು ಅಥವಾ ಪೋಸ್ಟರ್ ಗಳನ್ನು ಕಾಣಬಹುದಾಗಿದೆ. ಇಂದಿನ ದಿನಗಳಲ್ಲಿ ಡಿಜಿಟಲ್ ಮಾದರಿಯ ಪೋಸ್ಟರ್ ಗಳನ್ನು ಸಹ ಬಿಡುಗಡೆ ಮಾಡಲಾಗುತ್ತಿದೆ. ಬಣ್ಣ ಬಣ್ಣದ ಜಾಹೀರಾತುಗಳು  ಒದುಗರನ್ನು ನೋಡುಗರನ್ನು ಹೆಚ್ಚು ಆಕರ್ಷಿಸುತ್ತವೆ. ತಂತ್ರಗಾರಿಕೆಯಿಂದ ಸಿನಿಮಾದ ಜಾಹೀರಾತುಗಳನ್ನು  ವಿಭಿನ್ನ ರೀತಿಯಲ್ಲಿ ನಾವು ಕಾಣಬಹುದಾಗಿದೆ. ಮೊದಮೊದಲು ಸೈಕಲಿನ ಮೇಲೆ ಒಂದು ಎತ್ತರವಾದ ಹಲಗೆಯ ಪಟ್ಟಿಯ ಮೇಲೆ ಸಿನಿಮಾದ ಚಿತ್ರಗಳನ್ನು ಅಂಟಿಸಿಕೊಂಡು ರಸ್ತೆ ರಸ್ತೆಗಳಲ್ಲಿ, ಬೀದಿ ಬೀದಿಗಳಲ್ಲಿ ಜನರಿಗೆ ಕೇಳಿಸುವ ಹಾಗೆ ಧ್ವನಿ ಘೋಷಕ ಗಳನ್ನು ಬಳಸಿ  ಕೂಗಿ ಹೇಳಾಲಾಗುತ್ತಿತ್ತು. ನೋಡಲು ಮರೆಯದಿರಿ.. ಮರೆತು ನಿರಾಶರಾಗದಿರಿ.. ನಿಮ್ಮ ಹತ್ತಿರ ಚಿತ್ರ ಮಂದಿರಗಳಲ್ಲಿ.. ಎನ್ನುವ ಘೋಷಿತ ವಾಕ್ಯಗಳು ಸಾರ್ವಜನಿಕರಿಗೆ ಕುತೂಹಲದ ಜೊತೆಗೆ ಮನರಂಜನೆಯ ರಸದೌತಣವೇನೊ ಎಂಬಂತೆ ಭಾಸವಾಗುತ್ತಿತ್ತು. ಸಿನಿಮಾ ಎಲ್ಲಾರನ್ನು ಸೆಳೆಯುವ ವಿಶಿಷ್ಟ ಮಾಧ್ಯಮವಾಗಿದೆ ಆದರೆ ತಂತ್ರಗಾರಿಕೆ ಬೆಳೆದಂತೆಲ್ಲಾ ಜನರ ಮಾಹಿತಿ ಪ್ರಸರಣ ಜಾಹೀರಾತುಗಳ ಪ್ರದರ್ಶನ ಬೇರೆ ದೃಷ್ಟಿಕೋನಗಳಲ್ಲಿ ಪ್ರಸಾರ ಮಾಡಲು ಪ್ರಾರಂಭವಾಯಿತು.  ಸಿನಿಮಾದ ಜಾಹೀರಾತುಗಳು ಗೋಡೆಗಳನ್ನು ತೊರೆದು ಪತ್ರಿಕೆ, ದೂರದರ್ಶನ, ಅಂತರ್ಜಾಲ, ಸಾಮಾಜಿಕ ಜಾಲತಾಣಗಳಾದ ಫೇಸ್ ಬುಕ್, ಇನ್ಸ್ಟಾಗ್ರಾಮ್, ಯೂಟ್ಯೂಬ್, ಮುಂತಾದ ಹಲವಾರು ಮಾರ್ಗಗಳನ್ನು ಚಿತ್ರರಂಗ ಕಂಡುಕೊಂಡಿದೆ.

- **ಕನ್ನಡ ಸಿನಿಮಾ ಜಾಹೀರಾತುಗಳಲ್ಲಿ ಮಹಿಳೆಯರ ಚಿತ್ರಣ**

ಸಿನಿಮಾಗಳಲ್ಲಿ ಮಹಿಳೆಯರ ಚಿತ್ರಣ ಏಕರೂಪವಾಗಿದೆ. ಪುರುಷರೇ ಪ್ರಬಲ್ಯ ಮೇರೆಯುವ ಸಿನಿಮಾರಂಗದಲ್ಲಿ ಮಹಿಳೆಯರು ದ್ವಿತೀಯ ದರ್ಜೆಗೆ ತೃಪ್ತಿ ಪಡಬೇಕಾದ ಪರಿಸ್ಥಿತಿಯು ಅನಾಧಿ ಕಾಲದಿಂದಲೂ ಬಂದಿರುವುದು ವಿಪರ್ಯಾಸದ ಸಂಗತಿ. ಸಿನಿಮಾದಲ್ಲಿ ಹೇಗೆ ನಾಯಕನೇ ಬಹು ಮುಖ್ಯ ಪಾತ್ರವನ್ನು ವಹಿಸುತ್ತಾನೋ ಹಾಗೆ ಸಿನಿಮಾದ ಅನೇಕ ಜಾಹೀರಾತುಗಳಲ್ಲಿ ನಾಯಕ ನಟರೇ ಕೇಂದ್ರಬಿಂದಗಳಾಗಿರುತ್ತಾರೆ. ಅನೇಕ ತಾರಮಣಿಗಳು ಅವರ ಸೌಂದರ್ಯವನ್ನು ತೋರಿಸಿ ಪುರುಷ ಪ್ರೇಕ್ಷಕರನ್ನು ಗಮನಸೆಳೆಯುವ ಸರುಕಾಗಿದ್ದಾರೆ ಮೋಹಕತಾರೆಗಳೆನಿಸಿರುವ ನಟಿಯರು ಅವರ ದೇಹದ ಆವ-ಭಾವಗಳಿಂದ ಮೈಮಾಟದಿಂದ ಮನಸ್ಸಿನ ಕಾಮನೆಗಳನ್ನು ಪ್ರಚೋದಿಸುವ ಹಾಗೂ ಸಿನಿಮಾದ ಭಿತ್ತಿ ಪತ್ರಗಳ ಜಾಹೀರಾತಿನಲ್ಲಿ ಕೇವಲ ಪ್ರಣಯದ ಚಿತ್ರಗಳು, ದೇಹವನ್ನು ಪ್ರದರ್ಶಿಸುವ ಭಂಗಿಗಳಿಂದ ಇತ್ತೀಚಿನ ಸಿನಿಮಾಗಳು ವೀಕ್ಷಕರನ್ನು ಚಿತ್ರಮಂದಿರಗಳಿಗೆ ಕರೆತರುವ ಅಹ್ವಾನ ಪತ್ರಿಕೆಗಳಾಗಿರುವುದು ಒಂದು ದುರಂತವೇ ಸರಿ. ಕೇವಲ ಮಹಿಳೆ ಸೌಂದರ್ಯ ತೋರಿಕೆಯ ಸರುಕಲ್ಲ ಅವಳ ಭಾವನೆಗಳಿಗೆ, ಸಂವೇದನೆಗಳಿಗೆ, ಸ್ಪಂದಿಸುವ ಚಲನಚಿತ್ರಗಳು ಬಂದರು ಅದು ಹೆಚ್ಚು ಪ್ರೇಕ್ಷಕರನ್ನು ತಲುಪಲು ವಿಫಲವಾಗಿದೆ. ಮಹಿಳಾ ಪ್ರಧಾನವಾದ, ಸ್ತ್ರೀ ವಾದವನ್ನು ಪ್ರೋತ್ಸಾಹಿಸುವ ಸಿನಿಮಾಗಳು ಬರುವುದೇ ಇತ್ತೀಚಿನ ದಿನಗಳಲ್ಲಿ ಬೆರಳಣಿಕೆಯಾಗಿದೆ . ಏನೇ ಆದರೂ ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ತರುವಲ್ಲಿ ನಾಯಕಿಯರ ಪಾತ್ರ ದೊಡ್ಡದಿದೆ. ನಾಯಕ ಕೇಂದ್ರಬಿಂದು ಆದರೂ ಮನರಂಜನೆಯ ದೃಷ್ಟಿಯಿಂದ ಮತ್ತು ಪುರುಷ ವೀಕ್ಷಕರ ಸುಪ್ತ ಮನೋಅಭಿಲಾಷೆಗಳನ್ನು ಕಲ್ಪನಾಲೋಕದಲ್ಲಿ ತಣಿಸುವ,ರಂಜಿಸುವ ಕಾರ್ಯ ಸುಂದರ ನಟಿಮಣಿಯರಿಂದಲೇ ಸಾದ್ಯ ವಾಗಿದೆ. ಇನ್ನೂ ಕನ್ನಡ ಆಧುನಿಕ ಚಲನಚಿತ್ರಗಳ ಜಾಹೀರಾತುಗಳಲ್ಲಿ ಮಹಿಳೆಯರ ಚಿತ್ರಣ ನಾಯಕನನ್ನು ಆಲಂಗಿಸುವ, ಅವನ ಪಕ್ಕದಲೇ ಇಂದೇ ಮುಂದೆ ನಿಂತು ದಿಟ್ಟಿಸಿ ನೋಡುವ, ತನ್ನ ದೇಹ ಸೌಂದರ್ಯದ ಮೂಲಕ ಎಲ್ಲಾರ ಗಮನಸೆಳೆಯುವ ಚಿತ್ರಗಳೇ ನೂರಕ್ಕೆ ತೋಂಬತ್ತು ರಷ್ಟು ಸಿನಿಮಾ ಗಳಲ್ಲಿ ಇದ್ದನ್ನೇ ತೋರಿಸಲಾಗುತ್ತಿದೆ. ಆದರೆ ಮಹಿಳಾ ಪ್ರಧಾನ ಚಿತ್ರಗಳನ್ನು ನಿರ್ದೇಶಿಸುವವರು ಹಾಗೂ ಮಹಿಳಾ ನಿರ್ದೇಶಕರು ಇದ್ದಕ್ಕೆ ಹೊರತಾಗಿದ್ದಾರೆ. ಅವರು ಮಹಿಳೆಯರ ಬವಣೆ, ಶೋಷಣೆ, ಸಾಧನೆ, ಸಮಸ್ಯೆಗಳ ಕುರಿತಾಗಿ ಇನ್ನು ಹೆಚ್ಚು ವಾಸ್ತವ ನೆಲೆಗಟ್ಟಿನಲ್ಲಿ ಬಿಂಬಿಸುವುದರಿಂದ ಇವರ ಸಿನಿಮಾ ಜಾಹೀರಾತಿನ ಭಿತ್ತಿ ಪತ್ರಗಳು ಹೆಚ್ಚು ಮಹಿಳಾ ಪ್ರಧಾನವಾಗಿ ಅವರ ಮನೋಭಾವನೆಗಳಿಗೆ, ವೇದನೆಗಳಿಗೆ, ಆಸಕ್ತಿಗಳಿಗೆ ಸ್ಪಂದಿಸುವ ನೆಲೆಗಟ್ಟಿನಲ್ಲಿ ರಚಿತವಾಗಿರುತ್ತದೆ. ಅದ್ದರಿಂದ ಸಿನಿಮಾ ನಿರ್ಮಾಣಗಳಲ್ಲಿ ಹೆಚ್ಚು ಹೆಚ್ಚು ಮಹಿಳಾಮಣಿಗಳು ಭಾಗವಹಿಸಿದರೆ ಪುರುಷ ಪ್ರಧಾನವಾದ ಸಿನಿಮಾ ರಂಗದಲ್ಲಿ ಹಾಗೂ ಸಿನಿಮಾ ಜಾಹೀರಾತುಗಳಲ್ಲಿ ಮಹಿಳಾ ಪ್ರಧಾನ್ಯತೆಯನ್ನು ಕಾಣಬಹುದಾಗಿದೆ.

- ಇತ್ತೀಚಿನ ಕನ್ನಡ ಸಿನಿಮಾಗಳ ಬಿತ್ತಿಪತ್ರ ಜಾಹೀರಾತುಗಳಲ್ಲಿ ಸ್ತ್ರೀ ಮನೋಭಾವನೆಗಳು, ಸಂವೇದನೆಗಳ ಬಗ್ಗೆ ಕಿರು ವಿಶ್ಲೇಷಣೆ

ಆಧುನಿಕ ಕನ್ನಡ ಚಿತ್ರರಂಗವು ವಿಶ್ವವಿಖ್ಯಾತಿಯನ್ನು ಮತ್ತು ಭಾರತದಾದ್ಯಂತ ತನ್ನ ಮಾರುಕಟ್ಟೆಯನ್ನು ಬೆಳೆಸಿಕೊಂಡು ಇತರೆ ಸಿನಿಮಾರಂಗಕ್ಕೆ ಪೈಪೋಟಿ ನೀಡುತ್ತಿದೆ. ಸುಮಾರು ವರ್ಷಕ್ಕೆ ಕನಿಷ್ಟ ನೂರಕ್ಕು ಹೆಚ್ಚು ಚಲನಚಿತ್ರಗಳನ್ನು ನಿರ್ಮಾಣ ಮಾಡುತ್ತಿದ್ದು, ಅನೇಕ ವಿಭಿನ್ನ ಕಥಾಹಂದರವುಳ್ಳ ಅನೇಕ ಪ್ರಯೋಗಾತ್ಮಕ ಚಿತ್ರಗಳನ್ನು ನಿರ್ಮಿಸುತ್ತಿರುವುದು ಹೆಮ್ಮೆಯ

ವಿಚಾರವೆ ಸರಿ. ಆದರೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಗಳ ನಿರ್ಮಾಣದ ಹಂತಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ವಿದೇಶಿ ಸಿನಿಮಾರಂಗಕ್ಕೆ ಹೋಲಿಸಿದರೆ ತೀರ ಕಡಿಮೆ. ಇನ್ನೂ ಆಧುನಿಕ ಕನ್ನಡ ಚಲನಚಿತ್ರಗಳಲ್ಲಿ ಮಹಿಳೆಯರ ಚಿತ್ರಣ ಹೇಳಿಕೊಳ್ಳುವ ಮಟ್ಟಿಗೆ ಸ್ತ್ರೀ ವೇದನೆಗಳು, ಅವಳ ಸಾಧನೆಗಳು ತೆರೆಮೇಲೆ ಭಿತ್ತರಿಸುತ್ತಿರುವುದು ವಿರಾಳಾತಿ ವಿರಳ. ಕೆಲವು ಬುದ್ದಿಜೀವಿಗಳು, ಸಮಾಜದ ಬಗ್ಗೆ ಕಾಳಜಿ ಹೊಂದಿರುವ ನಿರ್ದೇಶಕರುಗಳಾದ ಗಿರೀಶ್ ಕಾಸರವಳ್ಳಿ, ಪಿ. ಶೇಷಾದ್ರಿ, ಟಿ. ಎಸ್ ನಾಗಭರಣ, ಟಿ. ಎನ್ ಸೀತಾರಾಮ್. ಮಹಿಳಾ ನಿರ್ದೇಶಕರಾದ ಕವಿತಾಲಂಕೇಶ್, ರೂಪ ಅಯ್ಯಾರ್, ಅನನ್ಯ ಕಾಸರವಳ್ಳಿ, ರೂಪಾ ರಾವ್ ಮುಂತಾದವರು ಮಹಿಳಾ ಸಂವೇದನೆಯುಳ್ಳ ಸಿನಿಮಾಗಳನ್ನು ನಿರ್ಮಿಸುತ್ತಿದ್ದಾರೆ. ಇವರ ಸಿನಿಮಾ ಜಾಹೀರಾತುಗಳು ಕೂಡ ಸ್ತ್ರೀ ವಾದಗಳಿಗೆ ಸ್ತ್ರೀ ಮನೋಭಾವನೆಗಳಿಗೆ ಪೂರಕವಾಗಿ ಚಿತ್ರಸಿಲಾಗಿರುತ್ತದೆ. ಅಷ್ಟೇ ಅಲ್ಲದೇ ಇವರ ಸಿನಿಮಾಗಳ ಭಿತ್ತಿ ಪತ್ರಗಳ ಜಾಹೀರಾತುಗಳು ಕೂಡ ಯಾವುದೇ ರೀತಿಯ ದೇಹ ತೋರ್ಪಡಿಕೆಯ, ಸೌಂದರ್ಯಕ್ಕೆ ಸೀಮಿತವಾದ ಚಿತ್ರಗಳಿಂದ ಕೂಡಿರುವುದಿಲ್ಲ. ಇವರ ಪ್ರತಿ ದೃಶ್ಯಗಳು, ಹೊರಗೆ ಕಾಣುವ ಚಿತ್ರಗಳು ಮಹಿಳೆಯರ ಅಲೋಚನೆಗಳಿಗೆ, ಭಾವನೆಗಳಿಗೆ, ಬದುಕು-ಭವಣೆಗಳಿಗೆ ಅವರ ಜೀವನದ ಸಾಧಕ ಭಾಧಕಗಳಿಗೆ ಮಾತ್ರ ಸೀಮಿತವಾಗಿರುತ್ತದೆ ಹೊರೆತು ಇಲ್ಲಸಲ್ಲದ ಉಡುಗೆ-ತೊಡುಗೆಗಳನ್ನು ತೊಟ್ಟು ಕೇವಲ ನಾಯಕನ ಪ್ರಿಯ ಸಖಿಯಾಗಿ ಮಹಿಳೆಯರು ಬಿಂಬಿತವಾಗಿರುವುದಿಲ್ಲ.

**ವಿಧಾನ**

ಈ ಲೇಖನವು ಗೋಫ್ ಮನ್ ನ ಲಿಂಗತ್ವಅಳತೆ ಸಂಬಂದಿಸಿದ ಸಂಜ್ಞಾತ್ಮಕ (ಸೆಮಿಯೋಟಿಕ್ಸ್ )ವಿಶ್ಲೇಷಣೆಯ ಆಧಾರದ ಮೇಲೆ ರಚಿತವಾಗಿದ್ದು ಮುಖ್ಯವಾಗಿ ಸಂಜ್ಞಾತ್ಮಕ ವಿಶ್ಲೇಷಣೆ ವಿಧಾನದಲ್ಲಿ ಕಂಡು ಬರುವ ಗುರುತು(ಸೈನ್), ಸೂಚಕ( ಸಿಗ್ನಿಫೈರ್), ಮಹತ್ವಪೂರ್ಣ, ತೋರಿಸುವ (ಸಿಗ್ನಿಫೈಡ್) ವಿಧಗಳ ಮೂಲಕ ಆಧುನಿಕ ಕನ್ನಡ ಸಿನಿಮಾರಂಗದ ಭಿತ್ತಿಪತ್ರ ಜಾಹೀರಾತುಗಳಲ್ಲಿ ಮಹಿಳೆಯರನ್ನು ಹೇಗೆ ಚಿತ್ರಿಸಲಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಸುಮಾರು 2014 ರಿಂದ 2024 ರವರೆಗೆ ಬಿಡುಗಡೆಯಾದ ಹನ್ನೊಂದು ಚಲನಚಿತ್ರಗಳನ್ನು ಆಯ್ಕೆ ಮಾಡಿಕೊಂಡಿದ್ದು ಎಲ್ಲಾ ಸಿನಿಮಾಗಳ ಭಿತ್ತಪತ್ರ ಜಾಹೀರಾತುಗಳು ಕೇವಲ ಮಹಿಳೆಯರ ಮೇಲೆ ಕೇಂದ್ರಿಕೃತವಾಗಿರುತ್ತದೆ.

ಆಯ್ಕೆ ಮಾಡಿಕೊಂಡಿರುವ ಹನ್ನೊಂದು ಆಧುನಿಕ ಕನ್ನಡ ಸಿನಿಮಾರಂಗದ ಭಿತ್ತಿಪತ್ರ ಜಾಹೀರಾತುಗಳು

ಈ ಲೇಖನದಲ್ಲಿ ಆಯ್ಕೆ ಮಾಡಿಕೊಂಡಿರುವ ಚಲನಚಿತ್ರಗಳು ಮಹಿಳೆಯರ ಮೇಲೆ ಬಿಂಬಿತವಾಗಿರುತ್ತದೆ ಹಾಗೂ ಪ್ರತಿಯೊಂದು ಭಿತ್ತಿಪತ್ರ ಜಾಹೀರಾತುಗಳು ನಾಯಕಿ ಪಾತ್ರದಾರಿಯ ಮೇಲೆ ಹಾಗೂ ಮಹಿಳೆಯರ ಮೇಲೆ ಒಳಗೊಂಡಿರುವ ಪೋಸ್ಟರ್ ಗಳು ಈ ಜಾಹೀರಾತಗಳನ್ನು ಗುರುತು,ಸನ್ನೆ,ಸೂಚಕ,ತೋರಿಕೆ,ಮಹತ್ವಪೂರ್ಣ ಸಂಜ್ಞಾತ್ಮಕ ಅಂಶಗಳ ಆಧಾರದ ಮೇಲೆ ಭಿತ್ತಿ ಪತ್ರ ಜಾಹೀರಾತುಗಳಲ್ಲಿ ಮಹಿಳೆಯರನ್ನು ಹೇಗೆ ಚಿತ್ರಿಸಿದ್ದಾರೆ ಎಂಬ ನಿರ್ಧಾರಕ್ಕೆ ಬರಲಾಗಿದೆ. ಈ ಕೆಳಗಿನ ವಿಶ್ಲೇಷಿತ ಸಿನಿಮಾಗಳು ಪ್ರತಿಯೊಂದು ಮಹಿಳೆಯರ ಮೇಲೆ ಕೇಂದ್ರಿಕೃತ ಚಲನಚಿತ್ರಗಳಾಗಿವೆ.

**ನಮಸ್ತೇ ಮೇಡಂ (2014)**




ಕನ್ನಡ ಹಾಸ್ಯ ಭರಿತವಾದ ಚಲನಚಿತ್ರವಾಗಿದ್ದು ಈ ಸಿನಿಮಾವನ್ನು ಆರ್. ರಘುರಾಜ್ ನಿರ್ದೇಶಿಸಿ, ರವಿ ಗರಣಿ ನಿರ್ಮಾಣ ಮಾಡಿದ್ದಾರೆ ಈ ಚಿತ್ರದಲ್ಲಿ ರಾಗಿಣಿ ದ್ವಿವೇದಿ, ನಿಕೀಶಾ ಪಟೇಲ್, ಶ್ರೀನಗರ ಕಿಟ್ಟಿ ಅಭಿನಯಿಸಿದ್ದಾರೆ ಈ ಚಿತ್ರದ ಜಾಹೀರಾತು ಹಾಗೂ ಭಿತ್ತಿ ಪತ್ರಗಳು ನಾಯಕಿ ರಾಗಿಣಿ ದ್ವಿವೇದಿ ಯವರ ಮೇಲೆ ಕೇಂದ್ರಿಕೃತವಾಗಿದೆ ಅವರ ದೇಹ ಆವ-ಭಾವ ಗಳನ್ನು ತೋರಿಸುವ ಮೂಲಕ ಪ್ರೇಕ್ಷಕರನ್ನು ಸೆಳೆಯುವ ಪ್ರಯತ್ನವನ್ನು ಚಿತ್ರತಂಡ ಮಾಡಿದೆ.

**ಅಭಿನೇತ್ರಿ (2015)**




ನಾಯಕಿ ಪೂಜಾಗಾಂಧಿ ಮತ್ತು ಅವರ ಸಹೋದರಿ ಜ್ಯೋತಿ ಗಾಂಧಿ ನಿರ್ಮಾಣಗೊಂಡ ಈ ಚಿತ್ರವು ಕನ್ನಡ ಚಲನಚಿತ್ರರಂಗದಲ್ಲಿ ಮಿನುಗುತಾರೆ ಎಂದು ಖ್ಯಾತಿಗೊಳಿಸಿದ ಕಲ್ಪನಾ ರವರ ಜೀವನಾಧಾರಿತ ಚಿತ್ರವಾಗಿದೆ ಕಲ್ಪನಾ ರವರ ಪಾತ್ರವನ್ನು ಪೂಜಾಗಾಂಧಿಯವರೇ ನಿರ್ವಹಿಸಿದ್ದಾರೆ ಹಾಗೂ ಈ ಚಲನಚಿತ್ರ ಮಹಿಳಾ ಪ್ರಧಾನವಾದ ಚಿತ್ರವಾಗಿದ್ದರೂ ಸಿನಿಮಾದ ಪೋಸ್ಟರ್‌ಗಳು ಮುಖ್ಯವಾಗಿ ನಾಯಕಿಯ ಮೇಲೆ ಕೇಂದ್ರಿಕೃತವಾಗಿದೆ.

**ಕಿರಗೂರಿನ ಗಯ್ಯಾಳಿಗಳು (2016)**




ಪೂರ್ಣಚಂದ್ರ ತೇಜಸ್ವಿ ಬರೆದ ಕಾದಂಬರಿ ಆಧರಿಸಿದ ಸುಮನಾ ಕಿತ್ತೂರ್ ನಿರ್ದೇಶಿಸಿದ ಚಲನಚಿತ್ರವಾಗಿದೆ ಇದರಲ್ಲಿ ಶ್ವೇತಾ ಶ್ರೀವಾತ್ಸವ್, ಸುಕೃತಾ ವಾಗ್ಲೆ, ಕಾರುಣ್ಯ ರಾಮ್, ಸೋನು ಮತ್ತು ಮಾನಸಾ ಜೋಶಿ ಇನ್ನೂ ಮೊದಲಾದ ನಾಯಕಿಯರು ಒಳಗೊಂಡ ಮಹಿಳಾ ಪ್ರಧಾನವಾದ ಚಿತ್ರವಾಗಿದೆ ನಾಯಕಿಯರನ್ನು ಸಿನಿಮಾದ ಜಾಹೀರಾತಗಳಲ್ಲಿ ಹಳ್ಳಿ ಸೊಗಡಿನ ಮಹಿಳೆಯರಾಗಿ ತೋರಿಸಲಾಗಿದೆ ಮತ್ತು ಈ ಚಿತ್ರವನ್ನು ಮಹಿಳೆಯೇ ನಿರ್ದೇಶನ ಮಾಡಿರುವುದರಿಂದ ಯಾವುದೇ ಅಶ್ಲೀಲ ಎನ್ನಬಹುದಾದ ಚಿತ್ರಗಳು ಜಾಹೀರಾತುಗಳಲ್ಲಿ ಕಾಣಸಿಗುವುದಿಲ್ಲ.

**ಉರ್ವಿ (2017)**




ಈ ಚಲನಚಿತ್ರವನ್ನು 2017ರಲ್ಲಿ ಪ್ರದೀಪ್ ವರ್ಮಾ ನಿರ್ದೇಶನ ಮಾಡಲಾಗಿದೆ ಬಹತೇಕ ಮಹಿಳೆಯರನ್ನೆ ಒಳಗೊಂಡ ಈ ಚಿತ್ರದಲ್ಲಿ ಶೃತಿ ಹರಿಹರನ್, ಶ್ರದ್ಧಾ ಶ್ರೀನಾಥ್, ಶ್ವೇತಾ ಪಂಡಿತ್, ಭವಾನಿ ಪ್ರಕಾಶ್, ಜಾನ್ವಿ ಜ್ಯೋತಿ, ಅಚ್ಯುತ್ ಕುಮಾರ್ ರವರು ನಟಿಸಿದ್ದಾರೆ. ಈ ಚಿತ್ರದ ಜಾಹೀರಾತುಗಳು ಸಿನಿಮಾದ ಪೋಸ್ಟರ್ ಗಳು ಆಧುನಿಕ ಮಹಿಳೆಯ ತಳಮಳಗಳನ್ನು ಸೂಚಿಸುವ ಹಾಗೂ ಆಧುನಿಕ ಮಹಿಳೆಯರ ಸವಾಲುಗಳನ್ನು ತೋರಿಸುವ ಪ್ರಯತ್ನವನ್ನು ಈ ಚಿತ್ರದಲ್ಲಿ ಕಾಣಬಹುದಾಗಿದೆ.

**ನಾತಿಚರಾಮಿ (2018)**




ರಾಷ್ಟ್ರಪ್ರಶಸ್ತಿ ವಿಜೇತ ಕನ್ನಡ ಚಲನಚಿತ್ರ ವಾದ ಈ ಚಿತ್ರದ ಕಥೆಯನ್ನು ಲೇಖಕಿ ಸಂಧ್ಯಾರಾಣಿಯವರು ಬರೆದಿದ್ದಾರೆ ಹಾಗೂ ಮಂಸೋರೆ ಯವರು ನಿರ್ದೇಶಿಸಿದ್ದಾರೆ ಈ ಚಿತ್ರದಲ್ಲಿ ಶೃತಿ ಹರಿಹರನ್, ಶರಣ್ಯ, ಸಂಚಾರಿ ವಿಜಯ್, ಪೂರ್ಣಚಂದ್ರ ಮೈಸೂರು, ಬಾಲಾಜಿ ಮನೋಹರ್ ,ಗೋಪಾಲ್ ದೇಶಪಾಂಡೆ, ರವರು ಮನೋಜ್ಞವಾಗಿ ಅಭಿನಯಸಿದ್ದಾರೆ. ಈ ಚಿತ್ರದ ಭಿತ್ತಿ ಪತ್ರಗಳು ಕೇವಲ ನಾಯಕಿಯ ಮನೋಭಾವನೆಯ ಮೇಲೆ ಬಿಂಬಿತವಾಗಿದೆ. ಹಾಗೂ ಒಬ್ಬ ಮಹಿಳೆಯ ಮನೋಭಾವನೆಗಳ ಮೇಲೆ, ಅವಳ ಅಲೋಚನೆಗಳ ಮೇಲೆ ಚಿತ್ರಿಸಲಾಗಿದೆ.

**ಗಂಟುಮೂಟೆ (2019)**




ರೂಪಾ ರಾವ್ ಬರೆದು ನಿರ್ದೇಶಿಸಿರುವ ಈ ಚಿತ್ರವನ್ನು ಸಹದೇವ್ ಕೆಲವಡಿ ನಿರ್ಮಾಣ ಮಾಡಿದ್ದಾರೆ. ಈ ಚಿತ್ರವು ಯುವ ಬಾಲಕಿಯ ಭಾವನೆಗಳ ಮೇಲೆ ಕಥೆ ಕೇಂದ್ರಿಕೃತವಾಗಿದೆ ಹಾಗೂ ಅವರ ವಯೋ ಬೆಳವಣಿಗೆಯ ಮೇಲೆ ಬೆಳೆಯುವ ಪರಿಸರ ಹಾಗೂ ಶಾಲೆಯ ದಿನಗಳು ಹೇಗೆ ಮುಖ್ಯ ಎಂಬುದುನ್ನು ಪ್ರತಿ ಸಿನಿಮಾದ ಪೋಸ್ಟರ್ ಗಳಲ್ಲಿ ಕಾಣಬಹುದಾಗಿದೆ.

**ಆಕ್ಟ್-1978 (2020)**




ಕೋವಿಡ್-೧೯ ಸಾಂಕ್ರಾಮಿಕ ರೋಗದ ನಂತರ 2020 ರಲ್ಲಿ ಕನ್ನಡ ಸಾಮಾಜಿಕ ಥ್ರಿಲ್ಲರ್ ಚಲನಚಿತ್ರವಾಗಿದೆ ಈ ಚಿತ್ರವನ್ನು ಮಂಜುನಾಥ ಸೋಮಶೇಖರ ರೆಡ್ಡಿ ನಿರ್ದೇಶಿಸಿ ಮತ್ತು ದೇವರಾಜ್ ಆರ್. ನಿರ್ಮಿಸಿದ್ದಾರೆ ಇದರಲ್ಲಿ ಯಜ್ನಾಶೆಟ್ಟಿ ಗರ್ಭಿಣಿಯ ಪಾತ್ರಧಾರಿಯಾಗಿದ್ದು ಯಾವುದೋ ಅಪಧಾನೆಯಲ್ಲಿ ಸಿಲಿಕಿಕೊಂಡು ನ್ಯಾಯಕ್ಕಾಗಿ ಹೋರಾಡುವ ದಿಟ್ಟ ಮಹಿಳೆಯಂತೆ ಕಾಣಸುತ್ತಾರೆ

ಹೀರೋ (2021)




ರಿಷಬ್ ಶೆಟ್ಟಿ ಫಿಲಂಸ್ ಬ್ಯಾನರ್ ಅಡಿಯಲ್ಲಿ ನಿರ್ಮಿಸಿರುವ ಈ ಚಿತ್ರವನ್ನು ಎಂ. ಭರತ್ ರಾಜ್ ಬರೆದು ನಿರ್ದೇಶಿಸಿದ್ದಾರೆ. ಇದು ಕನ್ನಡದ ಕರಾಳ ವಿನೋದ ಚಲನಚಿತ್ರವಾಗಿದೆ. ಈ ಚಿತ್ರದ ನಾಯಕಿಯಾಗಿ ಗಣವಿ ಲಕ್ಷಣ್ ಕಾಣಿಸಿದ್ದು ಈ ಚಿತ್ರದಲ್ಲಿ ದಿಟ್ಟ ಮಹಿಳೆಯಾಗಿ, ಧೀರ ವನಿತೆಯ ಪಾತ್ರದಲ್ಲಿ ಸಿನಿಮಾ ಪೋಸ್ಟರ್ ಮತ್ತು ಜಾಹೀರಾತುಗಳಲ್ಲಿ ಕಾಣಬಹುದಾಗಿದೆ.

**ಓ (2022)**



ಅಮೂರ್ತ ಅಯ್ಯಂಗಾರ್ ಮತ್ತು ಮಿಲನಾ ನಾಗರಾಜ್ ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಂಡಿರುವ ಓ ಚಿತ್ರವನ್ನು ಮಹೇಶ ಸಿ ಅಮ್ಮಲ್ಲಿದೊಡ್ಡಿ ನಿರ್ದೇಶಿಸಿದ್ದಾರೆ ಹಾಗೂ ಚಿತ್ರದ ಜಾಹೀರಾತುಗಳು ಕೂತುಹಲ ಕೆರಳಿಸುತ್ತವೆ ಹಾಗೂ ಹೆಣ್ಣು ಸಮಾಜದ ಭಯಾನಕ ಸನ್ನಿವೇಶಗಳನ್ನು ಹೇಗೆ ಎದುರಿಸ ಬಲ್ಲಳು ಎಂಬುದಾಗಿ ಚಿತ್ರಿಸಲಾಗಿದೆ.

**ಮಾರಕಾಸ್ತ್ರ (2023)**



ಇದು ಕನ್ನಡದ ಸಾಹಸಮಯ ಚಿತ್ರವಾಗಿದ್ದು ಈ ಚಿತ್ರವನ್ನು ಗುರುಮೂರ್ತಿ ಸುನಾಮಿ ಬರೆದು ನಿರ್ದೇಶಿಸಿದ್ದಾರೆ ಮತ್ತು ಕೋಮಲಾ ನಟರಾಜ ನಿರ್ಮಿಸಿದ್ದಾರೆ. ಈ ಚಿತ್ರದ ನಾಯಕಿಯಾಗಿ ಪ್ರಧಾನ ಪಾತ್ರದಲ್ಲಿ ಕಾಣಿಸಿಕೊಂಡಿರುವ ಅನ್ಯಾಯದ ವಿರುದ್ಧ ಹೋರಾಡುವ ದಿಟ್ಟ ಮಹಿಳೆಯಾಗಿ, ಆಧುನಿಕ ಸಮಾಜದಲ್ಲಿ ಪುರುಷನ ಸಮಾನವಾಗಿ ನೆಲೆನಿಲ್ಲುವ ಹಾಗೆ ಚಿತ್ರದ ಜಾಹೀರಾತುಗಳಲ್ಲಿ ನಾವು ಕಾಣಬಹುದಾಗಿದೆ. ಇದು ಹೆಣ್ಣು ಸಾಹಸಮಯಿ ಒಬ್ಬಳೆ ಸ್ವಾವಲಂಬಿಯಾಗಿ ಬದುಕಬಲ್ಲಳು ಎಂಬುದನ್ನು ತೋರಿಸಲಾಗಿದೆ ಮಾಲಾಶ್ರೀ ಮೂಲಕ ಚಿತ್ರದ ಎಲ್ಲಾ ಪೋಸ್ಟರ್ ಗಳಲ್ಲಿ ಗೋಚರವಾಗುತ್ತದೆ.

**ಅಮೃತಮತಿ (2024)**




ಕನ್ನಡದ ಮಹಾಕವಿಗಳಲ್ಲೊಬ್ಬನಾದ 13 ನೇ ಶತಮಾನದಲ್ಲಿ ಜೀವಿಸಿದ್ದ ಜನ್ನನ ಯಶೋಧರ ಚರಿತ ಕೃತಿಯ ಮೇಲೆ ಆಧರಿತ ಚಿತ್ರ ಅಮೃತಮತಿ. ಸಾಹಿತಿ ಬರಗೂರು ರಾಮಚಂದ್ರಪ್ಪ ನಿರ್ದೇಶನ ಮಾಡಿರುವ ಈ ಚಿತ್ರದಲ್ಲಿ ನಾಯಕಿಯಾಗಿ ಹರಿಪ್ರಿಯ ಮುಖ್ಯ ಪಾತ್ರವಾದ ಅಮೃತಮತಿಯಾಗಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ಜಾಹೀರಾತುಗಳು ನಾಯಕಿಯ ಮೇಲೆ ಕೇಂದ್ರಿಕೃತವಾಗಿದೆ ಹೆಣ್ಣಿನ ಮನಸ್ಸು ಮತ್ತು ದೇಹಗಳ ನಡುವೆ ನಡೆಯುವ ಮನೋಭಾವನೆಗಳನ್ನು ಅಭಿವ್ಯಕ್ತ ಪಡಿಸುವ ಹಾಗೆ ಹಾಗೂ ನೋಡುವ ಪ್ರೇಕ್ಷಕರಿಗೆ ಅಮೃತಮತಿಯ ದೇಹ ಸೌಂದರ್ಯವು ಕಣ್ಣು ಸೆಳೆಯುವ ಹಾಗೆ ಚಿತ್ರಿಸಲಾಗಿದೆ. ಪ್ರತಿ ಪೋಸ್ಟರ್ ಗಳಲ್ಲಿಯು ನಾಯಕಿಯೇ ಪ್ರಧಾನ ಪಾತ್ರದಲ್ಲಿ ನಟಿಸಿದ್ದಾರೆ ಎಂಬುದು ಗೋಚರವಾಗುತ್ತದೆ.

| ಕ್ರ.ಸ | ಸಿನಿಮಾಗಳು | ಬಿಡುಗಡೆಯ ವರ್ಷ | ನಿರ್ದೇಶಕರು | ನಾಯಕಿಯರು |
|---|---|---|---|---|
| 1 | ನಮಸ್ತೇ ಮೇಡಂ | 2014 | ಆರ್ ರಘುರಾಜ್ | ರಾಗಿಣಿ ದ್ವಿವೇದಿ, ನಿಕೀಶಾ ಪಟೇಲ್, |
| 2 | ಅಭಿನೇತ್ರಿ | 2015 | ಸತೀಶ್ ಪ್ರಧಾನ್ | ಪೂಜಾಗಾಂಧಿ |
| 3 | ಕಿರಗೂರಿನ ಗಯ್ಯಾಳಿಗಳು | 2016 | ಸುಮನಾ ಕಿತ್ತೂರ್ | ಶ್ವೇತಾ ಶ್ರೀವಾತ್ಸವ್, ಸುಕೃತಾ ವಾಗ್ಲೆ, ಕಾರುಣ್ಯ ರಾಮ್, |
| 4 | ಉರ್ವಿ | 2017 | ಪ್ರದೀಪ್ ವರ್ಮಾ | ಶೃತಿ ಹರಿಹರನ್, ಶ್ರದ್ಧಾ ಶ್ರೀನಾಥ್, ಶ್ವೇತಾ ಪಂಡಿತ್, |
| 5 | ನಾತಿಚರಾಮಿ | 2018 | ಮಂಸೋರೆ | ಶೃತಿ ಹರಿಹರನ್, ಶರಣ್ಯ, |
| 6 | ಗಂಟುಮೂಟೆ | 2019 | ರೂಪಾ ರಾವ್ | ತೇಜು ಬೆಲವಾಡಿ, ಸ್ಫೂರ್ತಿ ಗುಮಾಸ್ಟೆ, |
| 7 | ಆಕ್ಟ್ | 2020 | ಮಂಜುನಾಥ ಸೋಮಶೇಖರ ರೆಡ್ಡಿ | ಯಜ್ಞಾಶೆಟ್ಟಿ |
| 8 | ಹೀರೋ | 2021 | ಎಂ. ಭರತ್ ರಾಜ್ | ಗಣವಿ ಲಕ್ಷಣ್ |
| 9 | ಓ | 2022 | ಮಹೇಶ ಸಿ ಅಮ್ಮಲ್ಲಿದೊಡ್ಡಿ | ಅಮೂರ್ತ ಅಯ್ಯಂಗಾರ್ ಮತ್ತು ಮಿಲನಾ ನಾಗರಾಜ್ |
| 10 | ಮಾರಕಾಸ್ತ್ರ | 2023 | ಗುರುಮೂರ್ತಿ | ಮಾಲಾಶ್ರೀ |
| 11 | ಅಮೃತಮತಿ | 2024 | ಬರಗೂರು ರಾಮಚಂದ್ರಪ್ಪ | ಹರಿಪ್ರಿಯ |

**ಕೋಷ್ಟಕ -1**

| **ಕ್ರ.ಸ** | **ಸಿನಿಮಾಗಳು** | **ಗುರುತು** | **ಸೂಚಕ** | **ಮಹತ್ವ** |
|---|---|---|---|---|
| 1 | ನಮಸ್ತೇ ಮೇಡಂ | ಮನುಷ್ಯ | ಮಹಿಳೆ & ಪುರುಷ | ಸಂವೇದನೆ, ಪ್ರಣಯ, ದಿಟ್ಟತನ, ಆಧುನಿಕತೆ |
| 2 | ಅಭಿನೇತ್ರಿ | ಮನುಷ್ಯ, ಕನ್ನಡಿ | ಮಹಿಳೆ | ಧೀರತನ, ಸ್ವಾಭಿಮಾನ, |
| 3 | ಕಿರಗೂರಿನ ಗಯ್ಯಾಳಿಗಳು | ಮನುಷ್ಯರು, ಕಟ್ಟಿಗೆ | ಮಹಿಳೆಯರು | ಕೋಪ, ಹಠ, ಸಾಧನೆ, ಧೀರತನ |
| 4 | ಊರ್ವಿ | ಮನುಷ್ಯ | ಹುಡುಗಿಯರು | ಭಯ, ಅಪನಂಬಿಕೆ, ಕಡಿಮೆ ವಿಶ್ವಾಸ |
| 5 | ನಾತಿಚರಾಮಿ | ಸ್ತಬ್ಧ ಚಿತ್ರ | ಮಹಿಳಯೆ ರೂಪ & ಚಿತ್ರ | ಮಾನಸಿಕ ತೋಳಲಾಟ |
| 6 | ಗಂಟುಮೂಟೆ | ಮಾನವರು | ಪ್ರಾಯದ ಹುಡುಗಿ, ಯುವತಿ, ಯುವಕ | ವಯೋ ಬೆಳವಣಿಗೆಯ ಬಯಕೆಗಳು, ವಯೋ ಸಹಜ ವರ್ತನೆಗಳು |
| 7 | ಆಕ್ಟ್ | ಮಾನವರು | ಮಹಿಳೆಯರು, ಪುರುಷರು | ಭಯ, ಧೀರತನ, ಸ್ವಾಭಿಮಾನ |
| 8 | ಹೀರೋ | ಮನುಷ್ಯ | ಮಹಿಳೆ | ದಿಟ್ಟತನ, ಅಂಜಿಕೆ, ಹಿಂಜರಿಕೆ |
| 9 | ಓ | ಮಾನವರು | ಮಹಿಳೆಯರು | ಎದರಿಕೆ, ಭಯ |
| 10 | ಮಾರಕಾಸ್ತ್ರ | ಮಾನುಷ್ಯ | ಮಹಿಳೆ | ದಿಟ್ಟತನ, ದೈರ್ಯ |
| 11 | ಅಮೃತಮತಿ | ಮನುಷ್ಯ | ವನಿತೆ | ಸಂವೇದನೆ, ಆಕರ್ಷಣೆ |

**ಕೋಷ್ಟಕ -2**

**ಉಪಸಂಹಾರ:**

ಸಿನಿಮಾದ ಜಾಹೀರಾತುಗಳಲ್ಲಿ ಅಥವಾ ಮಾಧ್ಯಮಗಳ್ಲಿ ಮಹಿಳೆಯ ಚಿತ್ರಣ ಕುರಿತಾದ ಅನೇಕ ಅಧ್ಯಯನಗಳಿಂದ ತಿಳಿದು ಬರುವ ಅಂಶಗಳೆಂದರೆ, "ಮಹಿಳಾ ಕೇವಲ ಕಾಮದ ಗೊಂಬೆ" ಮಾದಕತೆಯ ಸರಕಾಗಿ ಕಾಣುತ್ತಿರುವುದು ಸಾಮಾಜಿಕ ಬೇಜವಾಬ್ದಾರಿತನವೇ ಬಹುಮಟ್ಟಿಗೆ ಕಾರಣ.ಇವುಗಳನ್ನು ಸರಿಪಡಿಸಲು ಬದಲಿ ತಂತ್ರಗಾರಿಕೆ ಸಬಲಗೊಳಿಸಲು ಮಾಧ್ಯಮಗಳ ತಂತ್ರಗಾರಿಕೆ ಬದಲಾಗಬೇಕು, ಮಾಧ್ಯಮಗಳು ಮಹಿಳೆಯರನ್ನು ಧನಾತ್ಮಕವಾಗಿ ತೋರಿಸಿದಾಗ ಮಾತ್ರ ಬದಲಾವಣೆಯ ಪರ್ವ ಆರಂಭವಾಗುತ್ತದೆ ಹಾಗೂ ಸಮಾಜದ ಮಹಿಳಾ ಸಮುದಾಯಕ್ಕೆ ಪೂರಕವಾದ ಗೌರವಿತವಾದ ಪರಿಸರ ನಿರ್ಮಾಣವಾಗುತ್ತದೆ.

**ಆಧಾರ ಗ್ರಂಥಗಳು:**


- ಅಯ್ಯರ್ ಜಿ.ವಿ.: 'ಮೂರುಚಿತ್ರ– ಮೂರುದಾರಿ' ನವ ಕರ್ನಾಟಕಪಬ್ಲಿಕೇಷನ್ಸ್, ಕ್ರಿಸೆಂಟ್‌ರಸ್ತೆ, ಬೆಂಗಳೂರು, 1984
- ಅಕ್ಷರ (ಮೂಲ: ಸತೀಶ್ ಬಹಾದ್ದೂರ್): 'ರಂಗಭೂಮಿಮತ್ತುಚಲನಚಿತ್ರ', ಅಕ್ಷರ ಪ್ರಕಾಶನ, ಸಾಗರ, 1983
- ಕಾಸರವಳ್ಳಿ (ಗಿರೀಶ್): 'ಸಿನಿಮಾ ಕಲೆ ನೆಲೆ', ನವ ಕರ್ನಾಟಕಪಬ್ಲಿಕೇಷನ್ಸ್, ಕ್ರಿಸೆಂಟ್‌ರಸ್ತೆ, ಬೆಂಗಳೂರು,1983
- ಅವಿನಾಶ್ ತಿವಾರಿ, ನೋ ಆನ್ ಲೈನ್ ಅಡ್ವರ್ಟೈಸಿಂಗ್,,2018
- ಕರ್ನಾಟಕ ಚಲನಚಿತ್ರ, ವಾಣಿಜ್ಯ ಮಂಡಳಿ, ಕ್ರಿಸೆಂಟ್‌ರಸ್ತೆ, ಬೆಂಗಳೂರು -1, 1995.
  ಕೆ. ಜೈನ್ ಮತ್ತು ಪಿ ಮಹಜನ್ ಸೆಲ್ಲಿಂಗ್ ಅಂಡ್ ಅಡ್ವರ್ಟೈಸಿಂಗ್,
- ಜಯಂತ ಕಾಯ್ಕಿಣಿ,ಟೂರಿಂಗ್ ಟಾಕೀಸ್ ಸಿನೆಮಾ ಕುರಿತ ಕಿರುನೋಟಗಳು, ಮನೋಹರ ಗ್ರಂಥ ಮಾಲಾ, ಧಾರವಾಡ 2021
- ಎನ್. ಸಂಧ್ಯಾರಾಣಿ ಸಿನಿ ಮಾಯಾಲೋಕ,ಇಮೇಜಸ್ ಪ್ರಿಂಟ್ ರರ್ವೀಸಸ್, ಬೆಂಗಳೂರು-11,2021
- ಡಾ. ನಾಗೇಂದ್ರ. ಪುಟ್ಟಣ್ಣ ಕಣಗಾಲರ ಚಲನಚಿತ್ರಗಳು, ಶ್ರೀ ಚನ್ನಕೇಶವ ಪ್ರಕಾಶನ,ತುಮಕೂರು,-05,2017
- ಡಾ. ಪಿ.ಆರ್ ರಾಮದಾಸ ನಾಯ್ಡು, ಕನ್ನಡ ಸಿನಿಮಾ: ಜಾಗತಿಕ ಸಿನಿಮಾ ವಿಕಾಸ-ಪ್ರೇರಣೆ-ಪ್ರಭಾವ, ಶ್ರೀರಂಗ ಪ್ರಿಂರರ್ಸ್ ಪ್ರೈ. ಲಿ. ಮಾನೋಟೈಪ್, ಬನಶಂಕರಿ, ಬೆಂಗಳೂರು-70,2019
- ಪ್ರಭುಶಂಕರ: 'ಸಾಹಿತ್ಯ ಮತ್ತುಆಧುನಿಕತೆ', ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1993.
- ಪ್ರೊ. ಪೂನಂ ಕುಮಾರಿ, ಟೆಕ್ಸ್ಟ್ ಬುಕ್ ಆಫ್ ಅಡ್ವರ್ಟೈಸಿಂಗ್,,2021
- ಪಾಷಾ (ಅಬ್ದುಲ್‌ರೆಹಮಾನ್): 'ಸಿನಿಮಾ ಮತ್ತು ಪ್ರೇಕ್ಷಕ', ನವ ಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳುರು,2021
- ಪಿ. ಲಂಕೇಶ್: 'ಮುಸ್ಸಂಜೆಯ ಕಥಾ ಪ್ರಸಂU'À, ಲಂಕೇಶ್ ಪ್ರಕಾಶನ, ಬಸವನಗುಡಿ, ಬೆಂಗಳೂರು, 1978
- ಪಿ. ಲಂಕೇಶ್: 'ಅಕ್ಕ' ಲಂಕೇಶ್ ಪ್ರಕಾಶನ ಬಸವನಗುಡಿ, ಬೆಂಗಳೂರು, 1991
- •ಪಿ. ಲಂಕೇಶ್: 'ಕಲ್ಲು ಕರಗುವ ಸಮಯ', ಲಂಕೇಶ್ ಪ್ರಕಾಶನ, ಬಸವನಗುಡಿ, ಬೆಂಗಳೂರು, 1990
- •ಸುಬ್ಬಣ್ಣ ಕೆ.ವಿ.: 'ಅಭಿವೃದ್ಧಿಗಾಗಿ ಸಿನಿಮಾ', ಅಕ್ಷರ ಪ್ರಕಾಶನ ಸಾಗರ 1983.